**ಕರ್ನಾಟಕ ಸರ್ಕಾರ**

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ 06 ವರ್ಗಾವಣೆ 2018-19 ವ&ನಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:10..08.2018.

**ಕಾರಣ ಕೇಳಿ ತಿಳುವಳಿಕೆ ಪತ್ರ**

ವಿಷಯ: ಕಾಲೇಜು ಶಿಕ್ಷಣ ಇಲಾಖೆಯ ಬೋಧಕ/ಬೋಧಕೇತರ ಸೇವಾ ವಿವರ ಹಾಗೂ ಕಾರ್ಯಭಾರ ಪಟ್ಟಿಯನ್ನು ಇಎಂಐಎಸ್‌ನಲ್ಲಿ ದಾಖಲಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿ ಸಮ ಸಂಖ್ಯೆ ಸುತ್ತೋಲೆ ದಿನಾಂಕ:26-07-2018 & .

*****

ಕಾಲೇಜು ಶಿಕ್ಷಣ ಇಲಾಖೆಯ 2018-19ನೇ ಸಾಲಿನ ವರ್ಗಾವಣೆ ಸಂಬಂಧ ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರ ಸೇವಾ ವಿವರಗಳನ್ನು ಹಾಗೂ ವಿಷಯವಾರು ನಿಖರವಾದ ಬೋಧನಾ ಕಾರ್ಯಭಾರ ವಿವರಗಳನ್ನು ಕಾಲೇಜಿನ ಇಎಂಐಎಸ್ ತಂತ್ರಾಂಶದಲ್ಲಿ ನಮೂದಿಸುವಂತೆ ಮತ್ತು ಕಾಲೇಜಿನಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ (ಲೀನ್ ಹೊಂದಿರುವ) ಬೋಧಕರ/ ಬೋಧಕೇತರರ ವಿವರಗಳನ್ನು ಇಎಂಐಎಸ್‌ನಲ್ಲಿ ಸರಿಯಾಗಿರುವ ಬಗ್ಗೆ ಪರಿಶೀಲಿಸಿ, ದೃಢೀಕರಿಸಿ ದಿನಾಂಕ:08-08-2018ರ ಒಳಗೆ ಕಡ್ಡಾಯವಾಗಿ ಅಪ್‌ಲೋಡ್ ಮಾಡುವಂತೆ ಉಲ್ಲೇಖಿತ ಸುತ್ತೋಲೆಗಳಲ್ಲಿ ಹಾಗೂ ಎಸ್‌ಎಂಎಸ್ ಮುಖಾಂತರ ಸೂಚಿಸಲಾಗಿತ್ತು. ಆದಾಗ್ಯೂ ಕೆಳಕಂಡ 29 ಕಾಲೇಜುಗಳಲ್ಲಿ ಮಾಹಿತಿಯನ್ನು ಅಪ್ ಲೋಡ್ ಮಾಡದೇ ಇರುವುದು ಗಮನಿಸಲಾಗಿದೆ.

2018-19ನೇ ಸಾಲಿನ ವರ್ಗಾವಣೆ ಪ್ರಕ್ರಿಯೆಗೆ ಸದರಿ ಮಾಹಿತಿಗಳು ಅತ್ಯವಶ್ಯವೆಂದು ಸೂಚನೆಗಳನ್ನು ನೀಡಲಾಗಿದ್ದರೂ ಸದರಿ ಸೂಚನೆಗಳನ್ನು ಧಿಕ್ಕರಿಸಿ ಇದುವರೆವಿಗೂ ಮಾಹಿತಿಯನ್ನು ಇಎಂಐಎಸ್‌ನಲ್ಲಿ ಅಪ್‌ಲೋಡ್ ಮಾಡದೇ ಇರುವುದನ್ನು ಗಂಭೀರವಾಗಿ ಪರಿಗಣಿಸಿದೆ. ಕರ್ನಾಟಕ ನಾಗರೀಕ ಸೇವಾ ನಿಯಮಗಳನ್ವಯ ನಿಮ್ಮ ವಿರುದ್ಧ ಏಕೆ ಶಿಸ್ತು ಕ್ರಮಕೈಗೊಳ್ಳಬಾರದು ಎಂಬ ಬಗ್ಗೆ ಸೂಕ್ತ ಸಮಜಾಯಿಷಿಯನ್ನು ಈ ನೋಟೀಸ್ ಜಾರಿಯಾದ 03 ದಿನಗಳೊಳಗಾಗಿ ಸಲ್ಲಿಸುವುದು ಹಾಗೂ ದಿನಾಂಕ:13-08-2018ರ ಒಳಗಾಗಿ ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರ ಸೇವಾ ವಿವರಗಳನ್ನು ಹಾಗೂ ವಿಷಯವಾರು ನಿಖರವಾದ ಬೋಧನಾ ಕಾರ್ಯಭಾರ ವಿವರಗಳನ್ನು ಕಾಲೇಜಿನ ಇಎಂಐಎಸ್ ತಂತ್ರಾಂಶದಲ್ಲಿ ನಮೂದಿಸುವುದು ತಪ್ಪಿದಲ್ಲಿ ನಿಮ್ಮ ವಿರುದ್ಧ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.

Shilpa

**ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು**

**ಇವರಿಗೆ**

1. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹನಗೋಡು/ಹುಲ್ಲಹಳ್ಳಿ/ಕೊಪ್ಪ, ಮದ್ದೂರು ತಾ./ ಕ್ಯಾತನಹಳ್ಳಿ/ನಾಗಮಂಗಲ/ಶಿರಾಳಕೊಪ್ಪ/ಭರಮಸಾಗರ/ದಾವಣಗೆರೆ/ಪಂಚನಹಳ್ಳಿ/ಕಾಪು/ಕುಶಾಲನಗರ/ ಗುಡಿಗೇರಿ/ಅಣ್ಣಿಗೇರಿ/ಕಿತ್ತೂರು/ಬಸವನಬಾಗೇವಾಡಿ/ಚಿತ್ತಾಪುರ/ಸೇಡಂ/ಸುರಪುರ/ದೇವದುರ್ಗ/ಕುಷ್ಟಗಿ/ ಬಸವಕಲ್ಯಾಣ/ಹುಮ್ನಾಬಾದ್/ಮಂಗಳೂರು, ಯಲಬುರ್ಗಾ ತಾ./ಸಾತನೂರು/ಮುನಿಯಾಲು/ಕೆರೂರು.
2. ಪ್ರಾಂಶುಪಾಲರು, ವಾಣಿ ಸಕ್ಕರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಿರಿಯೂರು.
3. ಪ್ರಾಂಶುಪಾಲರು, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಮಂಡ್ಯ.
4. ಪ್ರಾಂಶುಪಾಲರು, ಸರ್ಕಾರಿ ಕಾನೂನು ಕಾಲೇಜು, ಹೊಳೆನರಸೀಪುರ.

*DCE 06 Showcause notice*